SEPTEMBER 27, 2025

AKASHAVANI - DHARWAD

PRADESH SAAMACHARA (KANNADA) 07.05 A.M

**<><><>**

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- **ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಪ್ರಗತಿಯಲ್ಲಿ; 1 ಲಕ್ಷ 20 ಸಾವಿರ ಸಮೀಕ್ಷಕರು, ಮನೆ ಮನೆ ಗಣತಿಯಲ್ಲಿ ಭಾಗಿ.**
- **ಯುವಜನತೆಯ ವ್ಯಕ್ತಿತ್ವ ರೂಪಿಸುವಲ್ಲಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೊಡುಗೆ ಅನನ್ಯ – ರಾಜ್ಯಪಾಲ ಥಾವರಚಂದ ಗೆಹ್ಲೋಟ್, ಶ್ಲಾಘನೆ.**
- **'ಸುಸ್ಥಿರ ಪರಿವರ್ತನೆಗಾಗಿ, ಪ್ರವಾಸೋದ್ಯಮ' ಧ್ಯೇಯದೊಂದಿಗೆ, ಇಂದು ವಿಶ್ವ ಪ್ರವಾಸೋದ್ಯಮ ದಿನಾಚರಣೆ.**
- **ನಾಳೆ ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿಯವರಿಂದ, ಆಕಾಶವಾಣಿ ಮೂಲಕ, ಮನದ ಮಾತು.**

<><><>

ಈಗ ವಾರ್ತೆಗಳ ವಿವರ

<><><>

**ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಪ್ರಗತಿಯಲ್ಲಿದ್ದು, ರಾಜ್ಯಾದ್ಯಂತ 1 ಲಕ್ಷ, 20 ಸಾವಿರದ 728 ಜನ ಗಣತಿದಾರರು, ಮನೆಗಳಿಗೆ ಭೇಟಿ ನೀಡಿ, ಕುಟುಂಬಗಳ ಸಮೀಕ್ಷೆ ಕೈಗೊಂಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರಿನಲ್ಲಿ, ಎಲ್ಲ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿ.ಇ.ಓ.ಗಳ ಜೊತೆ, ವಿಡಿಯೋ ಸಂವಾದ ಕೈಗೊಂಡು, ಮಹತ್ವದ ಕೆಲ ನಿರ್ದೇಶನಗಳನ್ನು, ಜಿಲ್ಲಾಡಳಿತಗಳಿಗೆ ನೀಡಿದರು. ಒಟ್ಟು 1 ಕೋಟಿ, 43 ಲಕ್ಷ, 81 ಸಾವಿರದ 702 ಕುಟುಂಬಗಳ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಆರಂಭವಾಗಿದೆ. ಇದು ವರೆಗೆ 2 ಲಕ್ಷ 76 ಸಾವಿರದ 16 ಕುಟುಂಬಗಳ ಸಮೀಕ್ಷೆ ಕೈಗೊಳ್ಳಲಾಗಿದೆ ಎಂದು, ಮುಖ್ಯಮಂತ್ರಿ ತಿಳಿಸಿದರು. ಗಣತಿದಾರರು ನಿಗದಿತ ಸಮಯದೊಳಗೆ ಸಮೀಕ್ಷೆ ಪೂರ್ಣಗೊಳಿಸಬೇಕು. ನಿತ್ಯ ಜಿಲ್ಲಾವಾರು ಸಮೀಕ್ಷೆ, ಶೇಕಡ 10 ರಷ್ಟು ಗುರಿ ಸಾಧಿಸಬೇಕು ಎಂದು, ಸೂಚಿಸಿದ್ದಾಗಿ ಎಕ್ಸ್ ಮಾಧ್ಯಮದಲ್ಲಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ.**

<><><>

ಯುವಜನತೆಯ ವ್ಯಕ್ತಿತ್ವ ರೂಪಿಸುವಲ್ಲಿ, ನೂರು ವರ್ಷಗಳ ಪರಂಪರೆ ಹೊಂದಿರುವ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಕೊಡುಗೆ, ಅಮೂಲ್ಯ ಎಂದು, ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಶ್ಲಾಘಿಸಿದ್ದಾರೆ. ಬೆಂಗಳೂರಿನ, ರಾಜಭವನದಲ್ಲಿ ಜರುಗಿದ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ವಲಯದ, ಎಲ್ಲ ಜಿಲ್ಲೆಗಳ ಮುಖ್ಯ ಆಯುಕ್ತರು, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ತರಬೇತುದಾರರ, ಸನ್ಮಾನ ಸಮಾರಂಭದಲ್ಲಿ ಅವರು, ಪಾಲ್ಗೊಂಡು ಮಾತನಾಡಿದರು. ಪರಿಸರ ಸಂರಕ್ಷಣೆ, ಆರೋಗ್ಯ ಜಾಗೃತಿ, ಸ್ವಚ್ಛತಾ ಕಾರ್ಯಕ್ರಮ, ಸಮುದಾಯ ಕೇಂದ್ರಿತ ಚಟುವಟಿಕೆಗಳು ಸ್ಫೂರ್ತಿದಾಯಕ ಹಾಗೂ ಅನುಕರಣೀಯ. ವಿಶೇಷವಾಗಿ, ಮಕ್ಕಳು ಹಾಗೂ ಯುವಜನತೆಯಲ್ಲಿ ದೈಹಿಕ ಸುದೃಢತೆಯೊಂದಿಗೆ, ನೈತಿಕ ಮೌಲ್ಯಗಳು, ಸಮರ್ಪಣೆ ಹಾಗೂ ನಾಯಕತ್ವ ಕೌಶಲಗಳನ್ನು ಬೆಳೆಸುವಲ್ಲಿ, ಗಣನೀಯ ಕೊಡುಗೆ ಸ್ಕೌಟ್ಸ್ ಮತ್ತು ಗೈಡ್ಸ್ ನೀಡಿದೆ, ಎಂದರು. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರೀಯ ಮುಖ್ಯ ಆಯುಕ್ತ ಕೆ.ಕೆ ಖಂಡೇಲವಾಲ್, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ನೂತನ ಜಾಲತಾಣವನ್ನು, ಅನಾವರಣ ಗೊಳಿಸಿದರು.

<><><>

ಕೇಂದ್ರ ವಾರ್ತಾ ಶಾಖೆಯ, ಬೆಂಗಳೂರು ಪಿ.ಐ.ಬಿ. ಘಟಕ, ವಿಜಯಪುರ ಜಿಲ್ಲಾಡಳಿತದ ಸಹಭಾಗಿತ್ವದಲ್ಲಿ, ವಿಜಯಪುರದ ಜಿಲ್ಲಾಡಳಿತ ಭವನದಲ್ಲಿ, ಕೇಂದ್ರ ಪುರಸ್ಕೃತ ಯೋಜನೆಗಳ ಕುರಿತು, ಮಾಧ್ಯಮದವರಿಗಾಗಿ, ವಾರ್ತಾಲಾಪ ಕಾರ್ಯಾಗಾರ ಹಾಗೂ ಪ್ರದರ್ಶಿನಿ ಆಯೋಜಿಸಿತ್ತು. ಸಂಸದ ರಮೇಶ ಜಿಗಜಿಣಗಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಜನ ಧನ, ಆಧಾರ್ ಮತ್ತು ಮೊಬೈಲ್ –ಜಾಮ್ ಮೂಲಕ, ಡಿಜಿಟಲೀಕರಣಕ್ಕೆ, ಕೇಂದ್ರ ಸರ್ಕಾರ ಆದ್ಯತೆ ನೀಡಿದೆ. ಸರ್ಕಾರದ ಎಲ್ಲ ಯೋಜನೆಗಳ ಅರ್ಹ ಫಲಾನುಭವಿಗಳ ಖಾತೆಗೆ, ಸರಳ, ಸುಲಭ, ಪಾರದರ್ಶಕ ಹಾಗೂ ಯಾವುದೇ ಮೋಸಕ್ಕೆ, ಮಧ್ಯವರ್ತಿಗಳಿಗೆ ಆಸ್ಪದ ನೀಡದೆ, ನೇರ ನಗದು ವರ್ಗಾವಣೆ – ಡಿ.ಬಿ.ಟಿ. ವ್ಯವಸ್ಥೆ ಜಾರಿಗೊಳಿಸಿದೆ. ಸಕಾಲದಲ್ಲಿ ಯೋಜನೆಗಳ ಲಾಭ, ಸಮಾಜದ ಅತ್ಯಂತ ಕಟ್ಟಕಡೆಯ ವ್ಯಕ್ತಿಗೂ ತಲುಪುತ್ತಿದೆ ಎಂದು, ಸಂತಸ ವ್ಯಕ್ತ ಪಡಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, 'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ', 'ಭಾರತೀಯ ನ್ಯಾಯ ಸಂಹಿತೆ', 'ಭಾರತೀಯ ಸಾಕ್ಷ್ಯ ಅಧಿನಿಯಮ – 2023' ಕುರಿತು, ಮಾಧ್ಯಮ ಪ್ರತಿನಿಧಿಗಳಿಗೆ, ಮಾಹಿತಿ ನೀಡಿದರು. 'ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನ', 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಹಾಗೂ ಪೋಷಣ್ ಅಭಿಯಾನ'ದ ಕುರಿತು, ಮಾಹಿತಿ ಹಂಚಿಕೊಳ್ಳಲಾಯಿತು.

<><><>

ಗಂಗಾ ಆರತಿ ಮಾದರಿಯಲ್ಲಿ, ಕಾವೇರಿ ಆರತಿಗೆ, ರಾಜ್ಯ ಸರ್ಕಾರ, ವಿದ್ಯುಕ್ತ ಚಾಲನೆ ನೀಡಿದೆ. ಜಲ ಸಂಪನ್ಮೂಲ ಖಾತೆ ಸಚಿವ ಹಾಗೂ ಉಪ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ, ಮಂಡ್ಯ ಜಿಲ್ಲೆ, ಕೃಷ್ಣರಾಜ ಸಾಗರದ, ಬೃಂದಾವನ ಉದ್ಯಾನದಲ್ಲಿ, ಕಾವೇರಿ ನದಿಗೆ ಪುಷ್ಪಾರ್ಚನೆ ಮಾಡಿ, ಆರತಿ ಬೆಳಗಿ, ಗೋಧೂಳಿ ಮುಹೂರ್ತದಲ್ಲಿ, ಪ್ರಪ್ರಥಮ ಕಾವೇರಿ ಆರತಿಗೆ ಚಾಲನೆ ನೀಡಿದರು. ಶಂಖ ನಾದ, ಡೋಲು, ನಗಾರಿಗಳು ಮೊಳಗಿದವು. ವೇದ ಮಂತ್ರ ಪಠಣದೊಂದಿಗೆ, ಸಾರ್ವಜನಿಕರ ಸಮ್ಮುಖದಲ್ಲಿ, ಕಾವೇರಿ ಆರತಿ ಶ್ರದ್ಧಾ, ಭಕ್ತಿಯಿಂದ, ನಯನ ಮನೋಹರವಾಗಿ ಜರುಗಿತು.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಧ್ಯೇಯ ಸಂಗೀತ 10 ಸೆಕೆಂದುಗಳು

<><><>

ಸೇವೆ ಮತ್ತು ಸುಶಾಸನ ಧ್ಯೇಯದೊಂದಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಸೇವಾ ಪರ್ವದ ಮೂಲಕ, ಪರಿವರ್ತನೆ ಹಾಗೂ ಪ್ರಗತಿಯನ್ನು, ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದಿಂದ ಸಾಧಿಸಲು, ಶ್ರಮಿಸುತ್ತಿದೆ. ಭಾರತದಿಂದ ಕಳೆದು ಹೋದ ಅಥವಾ ಕಳ್ಳಸಾಗಣೆ ಮಾಡಲಾದ, ಪಾರಂಪರಿಕ ವಿಗ್ರಹಗಳು ಹಾಗೂ ಪ್ರಾಚೀನ ವಸ್ತುಗಳನ್ನು ಮರಳಿ ತರುವ ಮೂಲಕ, ಕೇಂದ್ರ ಸರ್ಕಾರ, ದೇಶದ ಸಾಂಸ್ಕೃತಿಕ ಗೌರವವನ್ನು ಪುನರುಜ್ಜೀವಿತಗೊಳಿಸುತ್ತಿದೆ. 2014 ರಿಂದ ಇಲ್ಲಿಯ ವರೆಗೆ, ಭಾರತದ ಬಹುಮೂಲ್ಯ 6 ನೂರಾ 42 ಪ್ರಾಚೀನ ವಸ್ತುಗಳನ್ನು ಪತ್ತೆ ಹಚ್ಚಿ, ಮರಳಿ ತರುವ ಪ್ರಯತ್ನ ಕೈಗೊಳ್ಳಲಾಗಿದೆ. ಕ್ರಿಸ್ತ ಪೂರ್ವ 3ನೇ ಶತಮಾನಕ್ಕೂ ಹಿಂದಿನ ಭಗವಾನ್ ಬುದ್ಧನ ಪಿಪ್ರಾಹ್ವಾ ಅವಶೇ ', ಯುನೈಟೆಡ್ ಕಿಂಗಡಮ್ ನಲ್ಲಿದ್ದ ಬ್ರಹ್ಮ ಮತ್ತು ಬ್ರಾಹ್ಮಣಿಯ ಕಲ್ಲಿನ ಶಿಲ್ಪ, ಅಮೆರಿಕೆಯಲ್ಲಿದ್ದ, ದುರ್ಗೆಯ ವಿಗ್ರಹ, ಬಾಹುಬಲಿಯ ಲೋಹದ ಚಿತ್ರ, ನೃತ್ಯ ಭಂಗಿಯಲ್ಲಿರುವ ನಟರಾಜನ ವಿಗ್ರಹ, ಆಸ್ಟ್ರೇಲಿಯಾದಿಂದ ಧ್ಯಾನಸ್ಥ ಬುದ್ಧ, ಕೆನಡಾದಿಂದ ಗಿಳಿ ಮಹಿಳೆ ಇತ್ಯಾದಿ, ಪ್ರಧಾನಮಂತ್ರಿಯವರ ವಿದೇಶ ಭೇಟಿ ಸಂದರ್ಭದಲ್ಲಿ, ಭಾರತಕ್ಕೆ ಹಿಂತಿರುಗಿಸಲಾಗಿದೆ. ಕಳೆದ ಹೋದ ಪ್ರಾಚೀನ ಪಾರಂಪರಿಕ ವಸ್ತುಗಳನ್ನು ಮರಳಿ ಪಡೆಯುವುದು, ಭಾರತದ ಸಾಂಸ್ಕೃತಿಕ ಪುನರುಜ್ಜೀವನ ಕಾರ್ಯ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 24 ಸೆಕೆಂದುಗಳು

<><><>

'ಪ್ರವಾಸೋದ್ಯಮ ಮತ್ತು ಸುಸ್ಥಿರ ಪರಿವರ್ತನೆ' ಧ್ಯೇಯದೊಂದಿಗೆ ಇಂದು, ವಿಶ್ವ ಪ್ರವಾಸೋದ್ಯಮ ದಿನವನ್ನು ಆಚರಿಸಲಾಗುತ್ತಿದೆ. ಸುಸ್ಥಿರ ಪ್ರವಾಸೋದ್ಯಮದಡಿ, ಇಂಗಾಲದ ಹೆಜ್ಜೆ ಗುರುತುಗಳನ್ನು ಕಡಿಮೆ ಮಾಡುವುದು, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಸ್ಥಳೀಯ ಆರ್ಥಿಕತೆಯನ್ನು ಬೆಂಬಲಿಸುವುದು, ಸಂಸ್ಕೃತಿಯನ್ನು ಗೌರವಿಸುವ ಧ್ಯೇಯ ಹೊಂದಲಾಗಿದೆ. ವಿಶ್ವ ಪ್ರವಾಸೋದ್ಯಮ ದಿನಾಚರಣೆ ಹಿನ್ನೆಲೆ, ಶಿವಮೊಗ್ಗದ, ವಿಶ್ವ ವಿಖ್ಯಾತ ಜೋಗ ಜಲಪಾತದಲ್ಲಾಗಿರುವ ಅಭಿವೃದ್ಧಿ ಚಟುವಟಿಕೆಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಟಿ. ಧರ್ಮಪ್ಪ.

<><><>

ಧ್ವನಿ: ಧರ್ಮಪ್ಪ ಟಿ 69 ಸೆಕೆಂದುಗಳು

<><><>

ರಾಷ್ಟ್ರ ಮಟ್ಟದ, 13ನೇ ಪೆನ್ಕಾಕ್ ಸಿಲಟ್ ಪಂದ್ಯಾವಳಿಗೆ, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ ಗುಪ್ತಾ ಕೊಪ್ಪಳ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಚಾಲನೆ ನೀಡಿದರು. ಅಪರೂಪದ ಸಮರಕಲೆ – ಪೆನ್ಕಾಕ್ ಸಿಲಟ್ ಬೆಳವಣಿಗೆಗೆ ಸಹಕಾರ ನೀಡುವುದಾಗಿ ತಿಳಿಸಿದರು. ಒಟ್ಟು ಐದು ವಿಭಾಗಗಳಲ್ಲಿ ಈ ಕ್ರೀಡಾಕೂಟ ಆಯೋಜಿತವಾಗಿದೆ. ವಿವಿಧ ರಾಜ್ಯಗಳ 500 ಸ್ಪರ್ಧಾಳು ಹಾಗೂ ಆಯೋಜಕರಿಗೆ ಶ್ರೀ ಗವಿಸಿದ್ದೇಶ್ವರ ಮಠದಲ್ಲಿ ವಸತಿ ಹಾಗೂ ಊಟಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ.

<><><>

ಮನ್ ಕೀ ಬಾತ್ 126 ನೇ ಆವೃತ್ತಿ, ನಾಳೆ ಬೆಳಗ್ಗೆ 11 ಗಂಟೆಗೆ, ಆಕಾಶವಾಣಿ ಮೂಲಕ ಪ್ರಸಾರಗೊಳ್ಳಲಿದೆ. ದೇಶ ವಿದೇಶಗಳಲ್ಲಿರುವ ಭಾರತೀಯರೊಮದಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಮನದ ಮಾತು ಹಂಚಿಕೊಳ್ಳಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಪ್ರಗತಿಯಲ್ಲಿ; 1 ಲಕ್ಷ 20 ಸಾವಿರ ಸಮೀಕ್ಷಕರು, ಮನೆ ಮನೆ ಗಣತಿಯಲ್ಲಿ ಭಾಗಿ.
- ಯುವಜನತೆಯ ವ್ಯಕ್ತಿತ್ವ ರೂಪಿಸುವಲ್ಲಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೊಡುಗೆ ಅನನ್ಯ – ರಾಜ್ಯಪಾಲ ಥಾವರಚಂದ ಗೆಹ್ಲೋಟ್, ಶ್ಲಾಘನೆ.
- 'ಸುಸ್ಥಿರ ಪರಿವರ್ತನೆಗಾಗಿ, ಪ್ರವಾಸೋದ್ಯಮ' ಧ್ಯೇಯದೊಂದಿಗೆ, ಇಂದು ವಿಶ್ವ ಪ್ರವಾಸೋದ್ಯಮ ದಿನಾಚರಣೆ.
- ನಾಳೆ ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿಯವರಿಂದ, ಆಕಾಶವಾಣಿ ಮೂಲಕ, ಮನದ ಮಾತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>